# ಕಮಾಲ್ ಮಾಡುವ ಕಪ್ಪು ಬೆಳ್ಳಿ

■ ರೂಪಾ ಕೆ.ಎಂ.

ಬೆಳ್ಳಿ ಇಟ್ಟರೆ ಕಪ್ಪಾಗುತ್ತೆ ಅನ್ನೋದೆಲ್ಲ ಹಳತಾಯ್ತು. ಈಗೇನಿದ್ದರೂ ಕಪ್ಪಾಗಿರುವ ಬೆಳ್ಳಿ ಆಭರಣ ತೊಟ್ಟು ಹೊಳೆಯುವ ಕಾಲ. ನೀಲಿ ಆಗಸದಲ್ಲಿ ಬೆಳ್ಳಿ ನಕ್ಷತ್ರಗಳು ಮಿಂಚಿದಂತೆ ಮಿಂಚಲು ಕಪ್ಪಾದ ಬೆಳ್ಳಿ ಆಭರಣಗಳು ಸಾಥ್ ಕೊಡುತ್ತವೆ ಅಂದರೆ ನಂಬುತ್ತೀರಾ? ಬೆಳ್ಳಿಗೂ ಹುಟ್ಟಿಗೂ ಮೊದಲಿನಿಂದಲೂ ಸಂಬಂಧ. ಒಂದು ಮನೆಯಲ್ಲಿ ಮಗು ಹುಟ್ಟಿದ ತಕ್ಷಣ, ಹನ್ನೊಂದನೇ ದಿನಕ್ಕೆ ನಾಮಕರಣ ಆಗ್ತಿದ್ದಂಗೆ ಬೆಳ್ಳಿಯಲ್ಲಿ ಕಟ್ಟಿಸಿದ ಕಪ್ಪು ಮಣಿ ಸರ, ಪುಟ್ಟ ಕೈಬಳೆಗಳು, ಕಾಲಿನ ಕಡಗ, ಉಡುದಾರ ತರಲಾಗುತ್ತೆ. ಈಗ ಕಪ್ಪುಬೆಳ್ಳಿಯದ್ದೇ ಮಾತು.

ಬೆಳ್ಳಿಯೆಂದರೆ ಶುದ್ಧವಾಗಿ ತಿಳಿ ಬಿಳಿಯಾಗಿ ಹೊಳೀತಿರಬೇಕು ಅನ್ನೊ ಮಿಥ್ಯೆಯನ್ನು ಮುರಿದು ಕಡುಕಪ್ಪು ಬಣ್ಣವು ಬೆಳ್ಳಿ ಜತೆ ಸೇರಿ ಆಭರಣ ಲೋಕದಲ್ಲಿ ಹೊಸ ಕಮಾಲ್ ಅನ್ನೇ ಸೃಷ್ಟಿ ಮಾಡಿದೆ.

## ಕಪ್ಪು ಬೆಳ್ಳಿ ಎಂದರೇನು?

ಕಪ್ಪು ಬೆಳ್ಳಿಯನ್ನು ಆಕ್ಸಿಡೀಕರಿಸಿದ ಬೆಳ್ಳಿ ಎಂದೇ ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಕಪ್ಪು ಬೆಳ್ಳಿಯನ್ನು ಆಕ್ಸಿಡೀಕರಣ ಮತ್ತು ಪ್ಯಾಟಿನೇಷನ್ ಎಂಬ ಎರಡು ವಿಧಗಳಲ್ಲಿ ತಯಾರು ಮಾಡಲಾಗುತ್ತದೆ.

ಆಕ್ಸಿಡೀಕರಣವು ರಾಸಾಯನಿಕ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಒಂದು ವಸ್ತುವು ಆಮ್ಲಜನಕವನ್ನು ಪಡೆಯುತ್ತದೆ ಅಥವಾ ಎಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುತ್ತದೆ. ಆದರೆ, ಪ್ಯಾಟಿನೇಷನ್ ಎನ್ನುವುದು ಲೋಹಗಳ ಮೇಲೆ, ವಿಶೇಷವಾಗಿ ತಾಮ್ರ, ಕಂಚು, ಹಿತ್ತಾಳೆಯ ಮೇಲೆ ಸಂಭವಿಸುವ ಒಂದು ನಿರ್ದಿಷ್ಟ ರೀತಿಯ ಆಕ್ಸಿಡೀಕರಣ ಎನ್ನಬಹುದು. ಇದು ವರ್ಣರಂಜಿತ ಮೇಲ್ಮೈ ಪದರವನ್ನು ಸೃಷ್ಟಿಸುತ್ತದೆ.

ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಟೆಲ್ಯುರಿಯಂ ಮಿಶ್ರಣವೇ ಕಪ್ಪು ಬೆಳ್ಳಿ. ಗಂಧಕ ಪರಿಣಾಮದಿಂದಾಗಿ ಬೆಳ್ಳಿ ಲೋಹವು ಆಕ್ಸಿಡೀಕರಣಗೊಳ್ಳುತ್ತದೆ. ಗಂಧಕದ ಕಪ್ಪಿನ ಅಂಶವನ್ನು ಬೆಳ್ಳಿಯ ಮೇಲ್ಮೈ ಲೇಪನವಾಗಿ ಹಚ್ಚಲಾಗುತ್ತದೆ. ಹೊಳೆಯುವ ಬೆಳ್ಳಿಯ ಯಾವ ಭಾಗ ಕಪ್ಪಾಗಿಸಿ, ಅದಕ್ಕೆ ಆಕಾರ ಕೊಡಬೇಕು ಎಂಬುದರ ಬಗ್ಗೆ ವಿನ್ಯಾಸಕಾರರಿಗೆ ಸ್ಪಷ್ಟತೆ ಇದ್ದಾಗ ಅದ್ಭುತ ಆಭರಣ ಸೃಷ್ಟಿಯಾಗುತ್ತದೆ.

**ಕಪ್ಪು ಬೆಳ್ಳಿಯ ಚೋಕರ್:** ನೀಳ ಕುತ್ತಿಗೆಗೆ ಚೋಕರ್ ಮುದ್ದಾಗಿ ಕಾಣುತ್ತದೆ. ಸಾಂಪ್ರದಾಯಿಕ ಅಥವಾ ಆಧುನಿಕ ವಿನ್ಯಾಸಗಳಲ್ಲಿ ಕಪ್ಪು ಬೆಳ್ಳಿಯ ಚೋಕರ್ ಸೆಟ್ ಲಭ್ಯವಿರುತ್ತದೆ. ಕಲ್ಲು ಮತ್ತು ಮುತ್ತಿನಿಂದ ಪೋಣಿಸಿದ ಕಪ್ಪು ಬೆಳ್ಳಿಯ ಚೋಕರ್‌ಗೆ ಎಲ್ಲಿಲ್ಲದ ಬೇಡಿಕೆ. ಇದಕ್ಕೆ ಹೊಂದುವ ಕಪ್ಪು ಬೆಳ್ಳಿ ಉಂಗುರ ಧರಿಸಬಹುದು.



**ಸರಳ ಸರಗಳು:** ಸಣ್ಣ ಸಣ್ಣ ಪೆಂಡೆಂಟ್ ಇರುವ ಸರಳ ಎನಿಸುವ ಕಪ್ಪು ಬೆಳ್ಳಿಯ ಸರಗಳನ್ನು ತೊಟ್ಟು ಎಲಿಗೆಂಟ್ ಆಗಿ ಕಾಣಿಸಿಕೊಳ್ಳಬಹುದು. ಈಗೀಗ ಕಪ್ಪುಬೆಳ್ಳಿಯನ್ನು ಇಷ್ಟಪಡುವವರಲ್ಲಿ ಗಂಡುಮಕ್ಕಳೇ ಹೆಚ್ಚು. ಕೈಗೆ ಕಡಗ ಹಾಗೂ ಕತ್ತಿನ ಆಭರಣಗಳನ್ನು ಇಷ್ಟಪಡುತ್ತಿದ್ದಾರೆ.

**ದೊಡ್ಡ ಕಿವಿಯೋಲೆಗಳು:** ಸಾಂಪ್ರದಾಯಿಕ ಸಮಾರಂಭಗಳಿಗೆ ದೊಡ್ಡ ಗಾತ್ರದ ಕಿವಿಯೋಲೆಗಳು, ಜುಮ್ಕಾಗಳು, ಉದ್ದನೆಯ ಹಾರಗಳನ್ನು ತೊಡಬಹುದು. ಇಂಡೋ ಫ್ಯಾಷನ್ ಔಟ್‌ಫಿಟ್‌ಗಳಾದ ಜಂಪ್‌ಸೂಟ್, ಧೋತಿ ಸೂಟ್, ಶರಾರ, ಪೆಂಪ್ಲೆಮ್ ಬ್ಲೌಸ್ ಆ್ಯಂಡ್ ಸ್ಕರ್ಟ್, ಪ್ಲಾಜೋ ಸೆಟ್, ಲೇಯರ್ಡ್ ಕೇಪ್, ಅನಾರ್ಕಲಿ ಪ್ಯಾಂಟ್ ಸೆಟ್, ಬ್ರೊಕೇಡ್ ಕಫ್ತಾನ, ಪಾರ್ಟಿವೇರ್‌ಗಳಿಗೂ ಕಪ್ಪು ಬೆಳ್ಳಿಯ ಆಭರಣಗಳು ಹೆಚ್ಚು ಹೊಂದಿಕೆಯಾಗುತ್ತವೆ.

ಉಡುಪು ಬಹಳ ಆಕರ್ಷಕವಾಗಿದ್ದಾಗ, ಸಣ್ಣ ಸಣ್ಣ ಸ್ಟಡ್ ಮತ್ತು ಸರಳ ಎನಿಸುವ ಕಪ್ಪು ಬೆಳ್ಳಿಯ ಆಭರಣಗಳನ್ನು ತೊಡಿ. ಉಡುಪು ಬಹಳ ಸರಳವಾಗಿದ್ದಾಗ, ದೊಡ್ಡ ಗಾತ್ರದ, ರಿಚ್ ಲುಕ್ ಇರುವ ಕಪ್ಪು ಬೆಳ್ಳಿಯ ಆಭರಣಗಳನ್ನು ತೊಟ್ಟು ಸಿಗ್ನೇಚರ್ ಸ್ಟೈಲ್ ರೂಪಿಸಿಕೊಳ್ಳಬಹುದು. ಕಪ್ಪು ಬೆಳ್ಳಿ ತೊಡುವಾಗ ಉಡುಪಿನ ಬಣ್ಣ ಬರ್ಗಂಡಿ, ಗಾಢ ನೀಲಿ ಅಥವಾ ಕಪ್ಪಾಗಿದ್ದರೆ ಒಳ್ಳೆಯದು. ಆದಷ್ಟು ಹೂವಿನ ಚಿತ್ತಾರಗಳಿರುವ ಬಟ್ಟೆಗಳನ್ನ ತೊಡಬೇಡಿ.

## ನಿರ್ವಹಣೆ ಹೀಗಿರಲಿ

ಕಪ್ಪು ಬೆಳ್ಳಿ ಮಸುಕಾಗುವುದನ್ನು ತಡೆಯಲು ಆದಷ್ಟು ಬೇರೆ ಲೋಹಗಳ ಸಂಪರ್ಕದಿಂದ ದೂರ ಉಳಿಯುವಂತೆ ಮಾಡಿ. ರಬ್ಬರ್ ಹಾಗೂ ರಾಸಾಯನಿಕಗಳಿಂದ ದೂರವಿಡಿ. ಒಂದು ಪಾತ್ರೆಯಲ್ಲಿ ಅಲ್ಯೂಮಿನಿಯಂ ಫಾಯಿಲ್ (ಹೊಳೆಯುವ ಬದಿ ಮೇಲಕ್ಕೆ) ಹಾಕಿ. ಆ ಪಾತ್ರೆಗೆ ಅಡುಗೆ ಸೋಡಾ ಮತ್ತು ಕುದಿಯುವ ನೀರನ್ನು ಸೇರಿಸಿ. ಕಪ್ಪು ಬೆಳ್ಳಿಯನ್ನು ಆ ಪಾತ್ರೆಯಲ್ಲಿ ಇರಿಸಿ, ಕೆಲವು ನಿಮಿಷಗಳ ಕಾಲ ನೆನೆಯಲು ಬಿಟ್ಟು, ತೊಳೆದು ಒಣಗಿಸಿಡಿ. ಜಿಪ್‌ಲ್ಯಾಕ್ ಬ್ಯಾಗ್ ಅಥವಾ ಕೇಸ್‌ನಲ್ಲಿ ಸಂಗ್ರಹಿಸಿಟ್ಟರೆ ಉತ್ತಮ.

ಗಾಳಿ ಮತ್ತು ತೇವಾಂಶಕ್ಕೆ ಒಡ್ಡಿಕೊಳ್ಳುವುದನ್ನು ತಪ್ಪಿಸಿ. ರಾಸಾಯನಿಕ ಅಂಶಗಳಿಂದ ದೂರವಿರಿಸಿ. ಸೌಮ್ಯವಾದ ಸೋಪ್ ಅಥವಾ ಬೆಳ್ಳಿ ಕ್ಲೀನರ್‌ಗಳಿಂದ ನಿಯಮಿತವಾಗಿ ಸ್ವಚ್ಛಗೊಳಿಸಿ. ಸ್ವಲ್ಪ ಮಸುಕಾಗುತ್ತಿದೆ ಅನಿಸಿದಾಗ ಟೂತ್‌ಪೇಸ್ಟ್ ಬಳಸಿ ಮೃದುವಾಗಿ ತೊಳೆದು, ಮೆತ್ತನೆಯ ಬಟ್ಟೆಯಲ್ಲಿ ಒರೆಸಿಡಿ. ಸ್ನಾನ ಹಾಗೂ ಈಜುವ ಮುನ್ನ ಕಪ್ಪುಬೆಳ್ಳಿಯ ಆಭರಣಗಳನ್ನು ತೆಗೆದಿಡುವುದು ಉತ್ತಮ. ■